ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 17 ನೇ ಮಾರ್ಚ್, 2020

ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಆಡಳಿತದ ಬಗ್ಗೆ

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ(ಪದವೀಧರರ ಕ್ಷೇತ್ರ):-

1083 (1284) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳೆಷ್ಟು ; ಅವುಗಳನ್ನು ನಿಯಂತ್ರಿಸುವ ಆಡಳಿತ ಇಲಾಖೆಗಳಾವುವು ; ವಿವರವಾಗಿ ಆಡಳಿತ ಇಲಾಖೆವಾರು ಮಾಹಿತಿ ನೀಡುವುದು ;

(ಆ) ಸಾರ್ವಜನಿಕ ಉದ್ದಿಮೆಗಳಲ್ಲಿ ಆಡಳಿತ ಇಲಾಖೆಗಳಿಗೆ ಯಾವ ಅಧಿಕಾರಗಳೇನು ; ವಿವರವಾಗಿ ಆಡಳಿತ ಹಾಗೂ ಇತರ ಅಧಿಕಾರಿಗಳೊಂದಿಗೆ ಮಾಹಿತಿ ನೀಡುವುದು ;

(ಇ) ನಿಗಮದ ನೇಮಕಾತಿ ನಿಯಮಗಳನ್ನು ಆಡಳಿತ ಇಲಾಖೆಯು ಅನುಮೋದಿಸಬೇಕೆ ? ಅಥವಾ ಬೇಡವೇ ;

(ಈ) ಸಾರ್ವಜನಿಕ ಉದ್ದಿಮೆಗಳು ಯಾವ ಯಾವ ವಿಷಯಗಳಲ್ಲಿ ಆಡಳಿತ ಇಲಾಖೆಯ ಅನುಮೋದನೆ ಪಡೆಯಬೇಕಾಗಿರುತ್ತದೆ? (ವಿವರವಾದ ಮಾಹಿತಿ ನೀಡುವುದು)